ಸಾಕ್ಷಿಗೆ ಪ್ರಮಾಣ ವಚನವನ್ನು ದಿಃ24-02-2026 ರಂದು ಬೋಧಿಸಲಾಯಿತು.

ಪಾಟೀ ಸವಾಲುಃ ವಾದಿ ಪರ ಶ್ರೀ ಜಿ ಎಸ್ ಎಚ್ ವಕೀಲರಿಂದಃ

ನಾನು 4 ನೇ ಪ್ರತಿವಾದಿ ಬಿದ್ರಕಾನ್ ಗ್ರಾಮ ಪಂಚಾಯತದಲ್ಲಿ ದಿಃ 22-09-2025 ರಿಂದ ಪಂಚಾಯತ ಅಭಿವೃದ್ಧಿ ಅಧಿಕಾರಿಯಾಗಿ ಅಧಿಕಾರ ವಹಿಸಿಕೊಂಡಿರುತ್ತೇನೆ.

2. ನಾನು ಈ ದಾವೆಯಲ್ಲಿ ದಾಖಲೆಗಳ ಆಧಾರದ ಮೇಲೆ ಸಾಕ್ಷ್ಯ ನುಡಿಯುತ್ತಿದ್ದೆನೆ ಎಂದರೆ ಸರಿ.

3. ನಿ.ಡಿ-1 ರ RTC ಯ ಆಸ್ತಿಯಲ್ಲಿ ವಾದಿಯ ಕುಟುಂಬಕ್ಕೆ ಅರ್ಧಾಂಶದ ಹಕ್ಕು ಇರುತ್ತದೆ ಎಂದರೆ ಸರಿ. ನಿ.ಡಿ-1 ರ RTC ಯ ಆಸ್ತಿಯಲ್ಲಿ 5 ರಿಂದ 10 ನೇ ಪ್ರತಿವಾದಿಯ ಕುಟುಂಬಕ್ಕೆ ಅರ್ಧಾಂಶದ ಹಕ್ಕು ಇರುತ್ತದೆ ಎಂದರೆ ಸರಿ.

4. ವಾದಿಯ ವಾಸ್ತವ್ಯದ ಮನೆ ಅನಾದಿಕಾಲದಿಂದಲೂ ಬಿದ್ರಕಾನ್ ಗ್ರಾಮ ಸರ್ವೆ ನಂ 245 ರಲ್ಲಿ ವಾದಿಯ ಅರ್ಧಾಂಶದ ಹಕ್ಕಿನಲ್ಲಿ ಇತ್ತು ಎಂದರೆ ಸರಿ. 5 ರಿಂದ 10 ನೇ ಪ್ರತಿವಾದಿಯ ವಾಸ್ತವ್ಯದ ಮನೆ ಅನಾದಿಕಾಲದಿಂದಲೂ ಬಿದ್ರಕಾನ್ ಗ್ರಾಮ ಸರ್ವೆ ನಂ 245 ರಲ್ಲಿ 5 ರಿಂದ 10 ನೇ ಪ್ರತಿವಾದಿಯ ಅರ್ಧಾಂಶದ ಹಕ್ಕಿನಲ್ಲಿ ಇತ್ತು ಎಂದರೆ ಸರಿ.

5. ವಾದಿ ಮತ್ತು 5 ರಿಂದ ಮತ್ತು 10 ನೇ ಪ್ರತಿವಾದಿಯ ಎರಡೂ ಮನೆ ಒಂದೇ ಕೊಡಿನಲ್ಲಿ ಪ್ರತ್ಯೇಕವಾಗಿ ಇತ್ತು ಎಂದರೆ ಸರಿ. ವಾದಿ ಮತ್ತು 5 ರಿಂದ ಮತ್ತು 10 ನೇ ಪ್ರತಿವಾದಿಯ ಎರಡೂ ಮನೆಗಳು ಬಿದ್ದು ಹೋಗುವ ಸ್ಥಿತಿಯಲ್ಲಿ ಇದ್ದವು ಎಂದರೆ ಸಾಕ್ಷಿ ನಾನು ನೋಡಿಲ್ಲ ಎಂದು ಸಾಕ್ಷ್ಯ ನುಡಿಯುತ್ತಾರೆ.

6. 5 ರಿಂದ ಮತ್ತು 10 ನೇ ಪ್ರತಿವಾದಿಗಳು ಸದರಿ ತಮ್ಮ ಹಳೆ ಮನೆಯನ್ನು ಕೆಡವಿ ಹೊಸ ಮನೆಯನ್ನು ಕಟ್ಟಿ ವಾಸ್ತವ್ಯದಲ್ಲಿ ಇರುತ್ತಾರೆ ಎಂದರೆ ಸರಿ.

7. ವಾದಿ ಹಿಂದಿನ ಕಾಲದಿಂದಲೂ ತಮ್ಮ ಮೂಲ ಮನೆಯನ್ನು ಶೆತ್ಗಿ ಮನೆಯನ್ನಾಗಿ ಮತ್ತು ವಾಸ್ತವ್ಯದ ಮನೆಯನ್ನಾಗಿ ಉಪಯೋಗಿಸುತ್ತಿದ್ದರು ಎಂದರೆ ಸರಿ.

8. ದಿಃ 31-01-2015 ರಂದು ವಾದಿ ತನ್ನ ಮನೆಗೆ ಸಂಬಂದಿಸಿದಂತೆ ನಿ.ಪಿ-5 ರಂತೆ ಮನೆ ಕಟ್ಟಲು ಅನುಮತಿ ಕೋರಿ ಅರ್ಜಿ ನೀಡಿರುತ್ತಾರೆ ಎಂದರೆ ಸರಿ. ಸದರಿ ನಿ.ಪಿ-5 ಕ್ಕೆ 5 ರಿಂದ 10 ನೇ ಪ್ರತಿವಾದಿಗಳು ತಕರಾರು ಮಾಡಿರುತ್ತಾರೆ ಎಂದರೆ ಸರಿ.

9. ಬಿದ್ರಕಾನ್ ಗ್ರಾಮ ಸರ್ವೆ ನಂ 245 ರಲ್ಲಿ ಒಟ್ಟು 29 ಗುಂಟೆ + 6 ಗುಂಟೆ ಖರಾಬ್ ಕ್ಷೇತ್ರದಲ್ಲಿ ವಾದಿ ಮತ್ತು 5 ರಿಂದ 10 ನೇ ಪ್ರತಿವಾದಿಗಳು ಪ್ರತ್ಯೇಕವಾಗಿ ಸ್ವಾಧೀನ ಅನುಬೋಗದಲ್ಲಿ ಇರುತ್ತಾರೆ ಎಂದರೆ ಸರಿ.

10. ನಿ.ಪಿ-8 ರ ಪ್ರಕಾರ ಕಾರ್ಯನಿರ್ವಾಹಕ ಅಧಿಕಾರಿ ದಾವಾಸ್ತಿಯಲ್ಲಿರುವ ಮನೆಗೆ ಸಂಬಂದಿಸಿದಂತೆ ವರದಿ ನೀಡಿರುತ್ತಾರೆ ಎಂದರೆ ಸರಿ. ಸದರಿ ನಿ.ಪಿ-8 ರಲ್ಲಿ ವಾದಿ ವಾಸವಿರುವ ಮನೆ ವಾಸ್ತವ್ಯಕ್ಕೆ ಯೋಗ್ಯ ಇರುವುದಿಲ್ಲ ಎಂದು ವರದಿ ನೀಡಿರುತ್ತಾರೆ ಎಂದರೆ ಸರಿ.

11. ವಾದಿ ವಾಸವಿರುವ ದಾವಾ ಮನೆಯನ್ನು ದುರಸ್ತಿ ಮಾಡುವಾಗ ನಿ.ಪಿ-11 ರಂತೆ ವಾದಿಗೆ ನಾವು ನೋಟೀಸ ನೀಡಿರುತ್ತೇವೆ ಎಂದರೆ ಸರಿ. ನಾನು ವಾದಿಯ ದಾವಾಸ್ತಿಯಲ್ಲಿರುವ ಮನೆಯನ್ನು ನೋಡಿರುವುದಿಲ್ಲ. ವಾದಿ ದಾವಾಸ್ತಿಯಲ್ಲಿ ಯಾವುದೇ ವಿಸ್ತರಣೆ ಮಾಡದೇ ತನ್ನ ಮೂಲ ಮನೆ ಇದ್ದ ಸ್ಥಳದಲ್ಲಿಯೇ ಸದರಿ ಮನೆಯನ್ನು ದುರಸ್ತಿ ಮಾಡಿರುತ್ತಾರೆ ಎಂದರೆ ಸಾಕ್ಷಿ ಆ ಬಗ್ಗೆ ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ವಾದಿ ದಾವಾಸ್ತಿಯಲ್ಲಿರುವ ಮನೆಯನ್ನು ಹೊಸತಾಗಿ ಕಟ್ಟಿಲ್ಲ, ಹಿಂದೆ ಇದ್ದ ಮೂಲ ಮನೆಯನ್ನು ದುರಸ್ತಿ ಮಾಡಿಸಿರುತ್ತಾರೆ ಎಂದರೆ ಸಾಕ್ಷಿ ಆ ಬಗ್ಗೆ ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ಮನೆಯ ದುರಸ್ತಿಗೆ ಯಾವುದೇ ಅನುಮತಿ ಬೇಡ ಎಂದರೆ ಸರಿಯಲ್ಲ.

12. ನಿ.ಪಿ-11 ರಂತೆ ನಾವು ವಾದಿಗೆ ನೀಡಿದ ನೋಟೀಸ್ ಕಾನೂನಿಗೆ ವಿರುದ್ಧವಾಗಿರುತ್ತದೆ ಎಂದರೆ ಸರಿಯಲ್ಲ. ವಾದಿಯು ವಾಸ್ತವ್ಯದಲ್ಲಿರುವ ಮನೆ ವಾಸಕ್ಕೆ ಯೋಗ್ಯ ಇರುವುದಿಲ್ಲ ಎಂದು ವಾದಿಗೆ ನಾವು ನೋಟೀಸ್ ನೀಡಿರುವ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ.

13. ನಾವು ವಾದಿಗೆ ಮನೆ ಕಟ್ಟಲು ಅನುಮತಿ ನೀಡಿದ ಕಾರಣ ವಾದಿ ದಾವಾಸ್ತಿಯಲ್ಲಿರುವ ತನ್ನ ಮನೆಯನ್ನು ದುರಸ್ತಿ ಮಾಡಿರುತ್ತಾರೆ ಎಂದರೆ ಸರಿಯಲ್ಲ.

14. ವಾದಿಯ ವಾಸ್ತವ್ಯದ ಮನೆಯನ್ನು ದುರಸ್ತಿ ಮಾಡಿಕೊಳ್ಳುವುದನ್ನು ತಡೆಯುವ ಸಲುವಾಗಿ 5 ರಿಂದ 10 ನೇ ಪ್ರತಿವಾದಿಗಳ ಮಾತುಕೇಳಿ ನಿ.ಪಿ-11 ರಂತೆ ವಾದಿಗೆ ನೋಟೀಸ್ ನೀಡಿರುತ್ತೇವೆ ಎಂದರೆ ಸರಿಯಲ್ಲ.

ಮರುವಿಚಾರಣೆ: ಇರುವುದಿಲ್ಲ.

(ನನ್ನ ಹೇಳಿಕೆ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ. ಸರಿ ಇದೆ,**

**ಸಹಿ ಇದೆ**

**ಸಿವಿಲ್ ನ್ಯಾಯಾಧೀಶರು ಸಿದ್ದಾಪುರ**